# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಸಕಲೇಶಪುರ

## C.C.No. 80/2022

| | | |
|---|---|---|
| **ಹೆಸರುಃ** | ದಿಲೀಪ್ ಕುಮಾರ್ | CW-1 |
| **ತಂದೆ/ಗಂಡ ಹೆಸರುಃ** | ಗಂಗಯ್ಯ | PW-2 |
| **ವಯಸ್ಸು** | 30 ವರ್ಷ | |
| **ವೃತ್ತಿ** | ಜಿಲ್ಲಾ ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಅಧಿಕಾರಿ, ಹಾಸನ | |
| **ವಿಳಾಸಃ** | ಹಾಸನ | **ದಿನಾಂಕಃ30-08-2023** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ ಎ ಪಿ ಪಿ ಯವರಿಂದ

ನಾನು 2019 ರಿಂದ 2022 ರವರೆಗೆ ಸಕಲೇಶಪುರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸಿಡಿಪಿಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28-06-2021 ರಂದು ನಾನು ಕರ್ತವ್ಯದಲ್ಲಿದ್ದಾಗ ಮಕ್ಕಳ ಸಹಾಯವಾಣಿ ಸಂಃ 1098 ಕ್ಕೆ ದೇವಲಕೆರೆ ಗ್ರಾಮದಲ್ಲಿ ಅಪ್ರಾಪ್ತ ಬಾಲಕಿಯ ವಿವಾಹ ನಡೆಯುತ್ತಿದೆ ಎಂದು ಕರೆ ಬಂದಿದ್ದು ಅದರ ಮಾಹಿತಿಯ ಮೇರೆಗೆ ಹಾಸನದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಚಾಸಾ-3 ಮತ್ತು 4 ರವರು ನಮ್ಮ ಕಛೇರಿಗೆ ಬಂದು ಮಾಹಿತಿ ತಿಳಿಸಿದರು. ನಾನು ಚಾಸಾ-5 ರವರನ್ನು ಚಾಸಾ-3 ಮತ್ತು 4 ರವರ ಜೊತೆ ದೇವಲಕೆರೆ ಗ್ರಾಮಕ್ಕೆ ವಿಚಾರಣೆ ಮಾಡಲು ಕಳುಹಿಸಿಕೊಟ್ಟಿರುತ್ತೇನೆ. ಅವರುಗಳು ದೇವಲಕೆರೆ ಗ್ರಾಮಕ್ಕೆ ಭೇಟಿ ನೀಡಿ ಲಾವಣ್ಯ ಎಂಬ ಅಪ್ರಾಪ್ತ ಬಾಲಕಿಯ ವಿವಾಹ ಆಗಿದೆ ಎಂದು ಆಕೆಯನ್ನು ಬಾಲಕಿಯರ ಬಾಲ ಮಂದಿರಕ್ಕೆ ಕರೆದುಕೊಂಡು ಹೋಗಿ ಬಿಟ್ಟಿರುತ್ತಾರೆ. ನಂತರ ನಾನು ಚಾಸಾ-3 ರವರ ಮಾಹಿತಿಯ ಮೇರೆಗೆ ದಿಃ 23-08-2021 ರಂದು ಸಕಲೇಶಪುರ ಗ್ರಾಮಾಂತರ ಪೋಲೀಸ್ ಠಾಣೆಗೆ ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತೇನೆ.

ಸಾಕ್ಷಿದಾರರು ದೂರು ಮತ್ತು ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎ ವಿ ಕೆ **ವಕೀಲರಿಂದ**

ನಿಪಿ-1 ರಲ್ಲಿ ಚಾಸಾ-2 ರವರ ಮದುವೆ ನೆರವೇರಿದ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-1 ದೂರಿನಲ್ಲಿ ಹುಡುಗನ ಊರು ಯಾವುದು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ-2 ರವರು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದೂರು ಕೊಡುವ ಪೂರ್ವದಲ್ಲಿ ಹುಡುಗಿ ಅಪ್ರಾಪ್ತಳಾ ಎಂದು ತಿಳಿದುಕೊಳ್ಳಲು ಯಾವುದೇ ದಾಖಲಾತಿ ನೋಡಿರುವುದಿಲ್ಲ ಎಂದರೆ ಸರಿ. ಯಾವುದೇ ಬಾಲ್ಯ ವಿವಾಹ ಆಗದೇ ಇದ್ದರೂ ನಾನು ಸುಳ್ಳು ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಜೆ ಎಂ ಎಫ್ ಸಿ,** ಸಕಲೇಶಪುರ